ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೨೭ನೇ ಜನವರಿ ೧೯೮೫, ಮಾಘ ೭, ೧೯೦೬ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು, (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು]

ಸಂತಾಪ ಸೂಚನೆ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಕೆ. ವೆಂಕಟರಮಣಗೌಡ ಅವರು ದಿನಾಂಕ ೨೧-೧-೧೯೮೫ ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ಹಿಂದುಳಿದ ವರ್ಗಗಳ ಏಳಿಗೆಗಾಗಿ ಬಹು ವಿಧವಾಗಿ ಶ್ರಮಿಸಿದ್ದರು. ಇವರು ೧೯೫೨ ರಲ್ಲಿ ಮದ್ರಾಸ್ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ದಿನಾಂಕ ೨೫-೩-೧೯೫೬ ರಲ್ಲಿ ರಾಜ್ಯ ಪುನರ್ವಿಂಗಡಣಾ ಸಮಯದಲ್ಲಿ ಕರ್ನಾಟಕ ವಿಧಾನ ಸಭೆಗೆ ವರ್ಗಾಯಿಸಲ್ಪಟ್ಟರು. ೧೯೫೭ ರಿಂದ ೧೯೬೭ರ ವರೆಗೆ ೨ನೇ ಮತ್ತು ೩ನೇ ವಿಧಾನ ಸಭೆಗೆ ಆಯ್ಕೆಯಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷಗಳ ಕಾಲ ಎದ್ದುನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನ ಆಚರಿಸಿದರು)

ಈ ಸಭೆಯಲ್ಲಿ-ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದ ವರಿಗೆ ಕಳುಹಿಸಿ ಕೊಡಲಾಗುವುದು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

೧೨೫ ಮುಂದೆ ಪ್ರಶ್ನೋತ್ತರ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ತಮ್ಮ ಪ್ರಶ್ನೆಯನ್ನು ಕೇಳಬಹುದು.

ಶಿವಮೊಗ್ಗ ನಗರದ ನೀರು ಸರಬರಾಜು ಯೋಜನೆ

೩೪೩. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಶಿವಮೊಗ್ಗ ನಗರವು ಕ್ಷಿಪ್ರಗತಿಯಿಂದ ಬೆಳೆಯುತ್ತಿದ್ದು ಹಾಲಿ ಇರುವ ನೀರು ಸರಬರಾಜು ವ್ಯವಸ್ಥೆ ಸಾಲದಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

(ಆ) ಹಾಗಿದ್ದಲ್ಲಿ ಶಿವಮೊಗ್ಗ ನೀರು ಸರಬರಾಜು ಯೋಜನೆಯನ್ನು ಉತ್ತಮಗೊಳಿಸಿ ಹೆಚ್ಚಿನ ಪ್ರಮಾಣದಲ್ಲಿ ನೀರು ಸರಬರಾಜು ಮಾಡಲು ಸರ್ಕಾರದವರು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

(ಅ) ಬಂದಿದೆ.

(ಆ) ಈ ಸಮಸ್ಯೆಯನ್ನು ಪರಿಶೀಲಿಸಿ ಅಭಿವೃದ್ಧಿ ಕಾರ್ಯಗಳ ಯೋಜನೆಯೊಂದನ್ನು ತಯಾರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸೂಚಿಸಲಾಗುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಹೋದ ವಿಧಾನ ಸಭೆಯಲ್ಲಿ ಶಿವಮೊಗ್ಗ ನಗರಕ್ಕೆ ನೀರಿನ ಸಮಸ್ಯೆಯೇ ಇಲ್ಲ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದರು. ಈಗ ಇದನ್ನು ಗಮನಕ್ಕೆ ತೆಗೆದುಕೊಂಡು ಉತ್ತರ ಕೊಟ್ಟಿರುವುದಕ್ಕೆ ಅವರಿಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಆದರೆ ಇದರ ಬಗ್ಗೆ ಸಾಧಾರಣವಾಗಿ ಎಷ್ಟು ವರ್ಷದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಒಂದು ಯೋಜನೆಯನ್ನು ತಯಾರು ಮಾಡುವುದಕ್ಕೆ ಸೂಚನೆ ಕೊಡುತ್ತೀರಿ ಮತ್ತು ಈ ಸೂಚನೆಯನ್ನು ಯಾವಾಗ ಕೊಡುತ್ತೀರಿ ? ಅದಷ್ಟು ಶೀಘ್ರವಾಗಿ, ಈ ಅಧಿವೇಶನ ಮುಗಿಯುವುದರೊಳಗಾಗಿ ಸೂಚನೆಯನ್ನು ಅವರಿಗೆ ಕೊಡಬೇಕು. ಏಕೆಂದರೆ ಈ ಯೋಜನೆಯನ್ನು ತಯಾರು ಮಾಡುವುದಕ್ಕೇ ಎರಡು ವರ್ಷಗಳ ಕಾಲ ತೆಗೆದುಕೊಂಡರೆ ಕಷ್ಟವಾಗುತ್ತದೆ. ಆದುದರಿಂದ ತಕ್ಷಣ ನಗರ ನೀರು ಸರಬರಾಜು ಮಂಡಳಿಯವರಿಗೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಹಿಂದೆ ೧೯೮೧ನೇ ಜನಗಣತಿ ಪ್ರಕಾರ ಶಿವಮೊಗ್ಗ ಜನಸಂಖ್ಯೆ ಒಂದೂವರೆ ಲಕ್ಷ ಇದ್ದುದು ಈಗಿನ ಜನಸಂಖ್ಯೆ ಒಂದು ಲಕ್ಷದ ೭೦ ಸಾವಿರಕ್ಕೂ ಹೆಚ್ಚಾಗಿದೆ. ಹಿಂದಿನ ಜನಸಂಖ್ಯೆಗನುಗುಣವಾಗಿ ೪.೫ ಮಿಲಿಯನ್ ಗ್ಯಾಲನ್ ನೀರು ಕೊಡುತ್ತಿದ್ದುದು ಸರಿಹೋಗುತ್ತಿತ್ತು. ಈಗ ಜನಸಂಖ್ಯೆ ಹೆಚ್ಚಾಗಿರುವುದರಿಂದ, ನೀರಿನ ಸರಬರಾಜು ಸಾಲುವುದಿಲ್ಲ ವೆಂಬುದನ್ನು ಪರಿಗಣನೆಗೆ ತೆಗೆದುಕೊಂಡಿದ್ದೇನೆ. ಈ ಕೂಡಲೇ ನಗರ ನೀರು ಸರಬರಾಜು ಮಂಡಲಿಯವರು ಅಂದಾಜು ಪಟ್ಟಿ ಸಿದ್ಧಮಾಡಿ, ಸರ್ಕಾರಕ್ಕೆ ಕಳುಹಿಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಅಂದಾಜುಪಟ್ಟಿ ತಯಾರ ಮಾಡುತ್ತೀರಿ. ಆದರೆ ಎರಡು ಸಾವಿರದ ಇಸವಿಯವರೆಗೆ ಎಷ್ಟು ಜನಸಂಖ್ಯೆ ಎಂದು ಅಂದಾಜು ಮಾಡಿದ್ದೀರಿ.ಆದುದರಿಂದಲೇ ಇಸವಿಗೆ ಮೀರಿ ಹೋಗಿದೆ.ಸಾಧಾರಣವಾಗಿ ಎಷ್ಟು ವರ್ಷದ ಜನಸಂಖ್ಯೆ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡ ಅಂದಾಜು ಮಾಡಬೇಕೆಂಬುದರ ಬಗ್ಗೆ ಸ್ವಲ್ಪ ವೈಜ್ಞಾನಿಕವಾದ ಸೂಚನೆ ಇಲ್ಲಿದೇಹೋದರೆ, ನೀವು ಪಟ್ಟಿ ತಯಾರು ಮಾಡುವ ಹೊತ್ತಿಗೆ ನಿಮ್ಮ ಪ್ಲಾನ್ ಔಟ್ ಡೇಟೆಡ್ ಆಗುತ್ತದೆ. ಆದುದರಿಂದ ಇದರ ಬಗ್ಗೆ ಸರಿಯಾದ ಸೂಚನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಜನಸಂಖ್ಯೆ ಬೆಳವಣಿಗೆಯ ವಿವರಗಳನ್ನು ನಾವು ಬೇರೆ ಇಲಾಖೆ ಮತಿಯಿಂದ ಪಡೆಯಬೇಕು. ಆದರೂ ಶಿವಮೊಗ್ಗ ನಗರದ ಜನಸಂಖ್ಯೆ ಸುಮಾರು ಎರಡು-ಎರಡೂವರೆ ಲಕ್ಷ ಆಗುತ್ತದೆಂದು ಅಂದಾಜು ಮಾಡಿಕೊಂಡು, ಯೋಜನೆ ತಯಾರಿಸಲಾಗುವುದು.

ಬೈಂದೂರು ಪುರಸಭೆ ವಲಯಕ್ಕೆ ಸುರಕ್ಷಿತ ನೀರು ಸರಬರಾಜು

೨೨೪. ಶ್ರೀ ಜಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ರಲ್ಲಿ ಬೈಂದೂರು ಪುರಸಭೆ ವಲಯಕ್ಕೆ ಸುರಕ್ಷಿತ ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡಲಾಗುವುದೆಂದು ಸರ್ಕಾರದವರು ಪ್ರತಿ ವರ್ಷ ಆಶ್ವಾಸನೆ ನೀಡಿದ್ದರೂ ಸದರಿ ಯೋಜನೆಯು ಕಾರ್ಯಾರಂಭವಾಗದಿರುವುದಕ್ಕೆ ಕಾರಣವೇನು ?

ಆ) ಬಹಳ ಅಗತ್ಯವಾದ ಈ ಯೋಜನೆ ಎಂದು ಕಾರ್ಯಾರಂಭವಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಈ ಯೋಜನೆಯನ್ನು ಕಾರ್ಯಕ್ರಮ ಆಧ್ಯತಾ ಪಟ್ಟಿಯಲ್ಲಿ ಸೇರಿಸಿ ಅವಶ್ಯವಿರುವ ಆರ್ಥಿಕಾನುಕೂಲತೆಯನ್ನು ಒದಗಿಸಿ ನಂತರದಲ್ಲಿ ಪ್ರಸ್ತಾವನೆಯನ್ನು ಆಡಳಿತಾತ್ಮಕ ಅನುಮೋದನೆಯನ್ನು ನೀಡುವುದಕ್ಕೆ ಕಳುಹಿಸಿ ಕೊಡುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ತಿಳಿಸಲಾಗಿದೆ.